# ಎರಡೆರಡು ರಾಮಾಯಣ

■ ವಿಶಾಖ ಎನ್‌.





ಲಾಕ್‌ಡೌನ್‌ನಲ್ಲಿ 'ರಾಮಾಯಣ' ಧಾರಾವಾಹಿಯನ್ನು ಹೊಸ ತಲೆಮಾರಿನವರೂ ಕಣ್ತುಂಬಿಕೊಂಡಿದ್ದಾಯಿತು. ಅದಕ್ಕೆ ಈಗಲೂ ಮಾರುಕಟ್ಟೆ ಇದೆ ಎನ್ನುವುದು ಸ್ಪಷ್ಟವಾದದ್ದೇ ಈಗ '3ಡಿ ರಾಮಾಯಣ'ದ ಗುಂಗು ಹತ್ತಿದೆ. ನಿರ್ಮಾಪಕ ಮಧು ಮಂಟೇನಾ ಈ ರಾಮಾಯಣಕ್ಕೆ ದೀಪಿಕಾ ಪಡುಕೋಣೆ ಅವರನ್ನು ನಾಯಕಿಯಾಗಿ ನಿಕ್ಕಿ ಮಾಡಿದ್ದಾರೆ. ಹೃತಿಕ್ ರೋಷನ್ ರಾವಣನ ಪಾತ್ರಕ್ಕೆ ಅಸ್ತು ಎಂದಿದ್ದು, ರಾಮ ಯಾರೆಂಬುದು ಮಾತ್ರ ಪ್ರಶ್ನೆಯಾಗಿಯೇ ಉಳಿದಿದೆ.

ಮಧು ಇದನ್ನು ಪ್ಯಾನ್ ಇಂಡಿಯಾ ಚಿತ್ರವಾಗಿಸುವ ಸಂಕಲ್ಪ ಮಾಡಿದ್ದಾರೆ. ನಾಯಕಿ ದೀಪಿಕಾಗೆ ದೇಶವ್ಯಾಪಿ ಜನಪ್ರಿಯತೆ ಇದೆ. ಇನ್ನು ಹೃತಿಕ್ ಮಾಗಿದ ನಟ. ಹೀಗಾಗಿ ರಾಮನ ಪಾತ್ರಕ್ಕೆ ದಕ್ಷಿಣ ಭಾರತದ ಸೂಪರ್ ಸ್ಟಾರ್ ಇರಲಿ ಎನ್ನುವುದು ಸಂಕಲ್ಪ. ಅವರು ಪ್ರಭಾಸ್ ಅವರನ್ನು ರಾಮನ ಪಾತ್ರಕ್ಕೆ ಆಯ್ಕೆ ಮಾಡಿಕೊಳ್ಳಬೇಕು ಎಂದು ಯೋಚಿಸುತ್ತಿದ್ದರು. ಅಷ್ಟರಲ್ಲೇ ನಿರ್ದೇಶಕ ಓಂ ರಾವುತ್ 'ಆದಿಪುರುಷ್' ಚಿತ್ರ ಕೈಗೆತ್ತಿಕೊಂಡರು. ಅದೂ ರಾಮಾಯಣದ ಕಥಾನಕವನ್ನು ಒಳಗೊಂಡಿದೆ. ಆ ಚಿತ್ರಕ್ಕೆ ಪ್ರಭಾಸ್ ನಾಯಕ ಅರ್ಥಾತ್ ರಾಮನ ಪಾತ್ರಧಾರಿ. ಕೃತಿ ಸನನ್ ಸೀತೆ. ಸೈಫ್ ಅಲಿ ಖಾನ್ ರಾವಣಕ್ಕೆ ಪಾತ್ರದಲ್ಲಿ ನಟಿಸಲಿದ್ದಾರೆ.

'ಆದಿಪುರುಷ್' ಚಿತ್ರವನ್ನು ಓಂ ರಾವುತ್ ಪ್ರಕಟಿಸುತ್ತಿದ್ದಂತೆ ಮಧು ಚಕಿತಗೊಂಡರು. ತಾವು ದೀರ್ಘ ಕಾಲದಿಂದ ಯೋಚಿಸುತ್ತಿದ್ದ ವಸ್ತುವಿಗೆ ಅದೇ ನಾಯಕನನ್ನು ಇನ್ನೊಬ್ಬರು ಗೊತ್ತುಪಡಿಸಿದ್ದನ್ನು ತಕ್ಷಣಕ್ಕೆ ಜೀರ್ಣಿಸಿಕೊಳ್ಳುವುದು ಅವರಿಗೆ ಕಷ್ಟವಾಯಿತು. ಸಿನಿಮಾ ಮಾರುಕಟ್ಟೆಯಲ್ಲಿ ಎಷ್ಟೋ ಸಲ ಕೆಲವರು ಒಂದೇ ರೀತಿ ಯೋಚಿಸುತ್ತಿರುತ್ತಾರೆ ಎನ್ನುವುದಕ್ಕೆ ಇದು ಉದಾಹರಣೆ.

ಪ್ರಭಾಸ್ ಅಂತೂ ಸಿಗಲಿಲ್ಲ. ಹಾಗಿದ್ದರೆ ತಮ್ಮ ಚಿತ್ರದ ರಾಮನ ಪಾತ್ರಕ್ಕೆ ನಾಯಕ ಯಾರು ಎಂಬ ಪ್ರಶ್ನೆ ಮಧು ತಲೆಯಲ್ಲಿ ಹಾಗೆಯೇ ಇದೆ. ಸದ್ಯಕ್ಕೆ ಅವರಿಗೆ ತೆಲುಗು ಸೂಪರ್ ಸ್ಟಾರ್ ಮಹೇಶ್ ಬಾಬು ಅವರನ್ನು ಆಯ್ಕೆ ಮಾಡಿದರೆ ಹೇಗೆ ಎಂಬ ಇನ್ನೊಂದು ಯೋಚನೆ ಮೂಡಿದೆ. ಚಿತ್ರಕಥೆಯನ್ನು ಮಹೇಶ್ ಬಾಬು ಅವರಿಗೆ ತಲುಪಿಸಿದ್ದು, ಅದು ಅವರಿಗೆ ಹಿಡಿಸಿದೆಯಂತೆ. ಇನ್ನೂ ಕೆಲವು ಸುತ್ತಿನ ಮಾತುಕತೆಗಳ ನಂತರ ಪಾತ್ರಕ್ಕೆ ಅವರನ್ನು ಒಪ್ಪಿಸಬೇಕಿದೆ.

ಏಕಕಾಲದಲ್ಲಿ ಎರಡೆರಡು 'ರಾಮಾಯಣ'ಗಳನ್ನು ಪ್ರೇಕ್ಷಕರು ಹೇಗೆ ಸ್ವೀಕರಿಸುತ್ತಾರೋ, ನೋಡಬೇಕು. ■

## ಹಳೆಯ ಲಯಕ್ಕೆ ಅಕ್ಷಯ್



ಕೋವಿಡ್ ಅಲೆ ಎದ್ದು, ಇಳಿದ ನಂತರ ಅತಿ ಹೆಚ್ಚು ಅವಧಿ ಚಿತ್ರೀಕರಣದಲ್ಲಿ ತೊಡಗಿಕೊಂಡ ಮೊದಲ ನಟ ಅಕ್ಷಯ್ ಕುಮಾರ್ ಎಂದು ಹಿಂದಿ ಚಿತ್ರರಂಗದಲ್ಲಿ ಅನೇಕರು ಹೇಳುತ್ತಿದ್ದಾರೆ. ಇದಕ್ಕೆ ಉದಾಹರಣೆಗಳೂ ಸಿಗುತ್ತವೆ. 'ಬೆಲ್‌ಬಾಟಂ' ಚಿತ್ರೀಕರಣ ಪೂರ್ಣಗೊಳಿಸಿದ ಅವರು, 'ಪೃಥ್ವಿರಾಜ್' ಹಾಗೂ 'ಅತರಂಗಿ ರೇ' ಸಿನಿಮಾಗಳ ಬಾಕಿ ಇದ್ದ ದೃಶ್ಯಗಳ ಚಿತ್ರೀಕರಣವನ್ನೂ ಮುಗಿಸಿಕೊಟ್ಟಿದ್ದಾರೆ. ಈಗ 'ಬಚ್ಚನ್ ಪಾಂಡೆ' ಸಿನಿಮಾ ಸೆಟ್ಟೇರಿದೆ.

ಸಾಜಿದ್ ನಾಡಿಯಾದ್‌ವಾಲಾ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ಫರ್ಹಾದ್ ಸಮ್ಜಿ ಆ್ಯಕ್ಷನ್–ಕಟ್ ಹೇಳುತ್ತಿದ್ದಾರೆ. ಕೃತಿ ಸನನ್, ಜಾಕ್ವೆಲಿನ್ ಫರ್ನಾಂಡಿಸ್, ಅರ್ಷದ್ ವಾರ್ಸಿ, ಪಂಕಜ್ ತ್ರಿಪಾಠಿ, ಪ್ರತೀಕ್ ಬಬ್ಬರ್ ತಾರಾಗಣದ ಈ ಚಿತ್ರದ ಮೇಲೆ ನಿರೀಕ್ಷೆ ಇದೆ. ಉತ್ತರ ಪ್ರದೇಶದ ಪರಿಸರದಲ್ಲಿ ನಡೆಯುವ ಕಥಾವಸ್ತುವನ್ನು ಈ ಚಿತ್ರ ಒಳಗೊಂಡಿದೆ. ಕೊರಳಿಗೆ ಬಗೆ ಬಗೆಯ ಸರಗಳನ್ನು ಹಾಕಿಕೊಂಡು, ತಲೆಗೆ ಕೆಂಪು ಟವಲ್ ಸುತ್ತಿಕೊಂಡ ಗೆಟಪ್‌ನಲ್ಲಿ ಅಕ್ಷಯ್ ಕಾಣಿಸಿಕೊಳ್ಳುತ್ತಿದ್ದಾರೆ. ರಾಜಸ್ಥಾನದ ಜೈಸಲ್ಮೇರ್‌ನಲ್ಲಿ ಚಿತ್ರೀಕರಣ ಶುರುವಾಗಿದೆ. ಉತ್ತರ ಪ್ರದೇಶದ ಸೆಟ್‌ಗಳನ್ನೂ ಅಲ್ಲಿಯೇ ಹಾಕಿ, ಚಿತ್ರೀಕರಣ ಮುಗಿಸುವ ಯೋಚನೆ ಚಿತ್ರತಂಡದ್ದು. ಹಳೆ ಕಾಲದ ಹವೇಲಿಗಳು ಅಲ್ಲಿಯೂ ಇರುವುದರಿಂದ ಕಥೆಗೆ ಪೂರಕವಾದ ಪರಿಸರ ಸಿಕ್ಕಿದೆ ಎಂದು ನಿರ್ದೇಶಕರು ಖುಷಿಪಟ್ಟಿದ್ದಾರೆ. ಎಲ್ಲವೂ ಅಂದುಕೊಂಡಂತೆ ಆದರೆ ಮುಂದಿನ ವರ್ಷ ರಣರಾಜ್ಯೋತ್ಸವದ ಹೊತ್ತಿಗೆ ಈ ಚಿತ್ರ ತೆರೆಕಾಣಲಿದೆ. ಅದಕ್ಕೂ ಮೊದಲು ಅಕ್ಷಯ್ ಅಭಿನಯದ ಇನ್ನೂ ಎರಡು ಮೂರು ಚಿತ್ರಗಳನ್ನು ನೋಡುವ ಭಾಗ್ಯ ಪ್ರೇಕ್ಷಕರದ್ದು. ■